Held over Question

Payment of Compensation for Lands acquired for construction of Tintini-Deodurg Road

548. Sri SADASHIVAPPA PATIL (Deodurg). —

Will the Minister for Revenue be pleased to state :—

(*a*) whether it has come to the notice of the Government that the farmeres of Deodurg Taluk are put to inconvenience for want of sanction of land compensation towards their land acquired for the construction of Tintini-Deodurg Road ;

(*b*) the action taken regardiug payment of compensation ?

Sri H. V. KOUJALGI (Minister for Revenue).—

(*a*) No.

(*b*) The Deputy Commissioner, Raichur, will be directed to expedite the matter,

Notice of adjournment motion *re*: Retrenchment of Local Candidates.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಈ ದಿನ ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡುತ್ತಾ ಇದ್ದಂಥ ಸುಮಾರು 5 ಸಾವಿರದಿಂದ 7 ಸಾವಿರ ಸ್ಥಳೀಯ ನೌಕರರಿಗೆ ಅದು ಸಂಬಂಧಪಟ್ಟದ್ದಾಗಿದೆ ಈ ಗಾಗಲೇ ಈ ಅಭ್ಯರ್ಥಿಗಳು ಹಲವಾರು ಬಾರಿ ಸರ್ಕಾರದವನ್ನು ಕಂಡಿದ್ದರು ಅಂತ ಕೇಳಿದ್ದೇನೆ. ನಾನಾ ಇಲಾಖೆಗಳಲ್ಲಿ ಅವರು ಈಗಾಗಲೇ 4 ವರ್ಷದಿಂದ 6 ವರ್ಷಗಳವರೆಗೂ ಕೆಲಸ ಮಾಡುತ್ತಾ ಇದ್ದು ಲೋಕಲ್ ಕಾಂಡಿಡೇಟ್ಸ್ ಆಗಿ ಮುಂದುವರಿದುಕೊಂಡು ಬಂದಿದ್ದಾರೆ. ಲೋಕಲ್ ಕಾಂಡಿಡೇಟ್ ಯಾರಿದ್ದಾರೆ ಅವರೆಲ್ಲರನ್ನೂ ಕೂಡ ತೆಗೆದುಹಾಕಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂಬ ವಿಚಾರ ತಿಳಿದುಬಂದು ಅವರ ಮನಸ್ಸಿನಲ್ಲಿ ತುಂಬಾ ಹೆದರಿಕೆಯುಂಟಾಗಿದೆ. ಈ ವಿಷಯದಲ್ಲಿ ಮೇಲ್ಮನೆಯಲ್ಲಿ ಕಳೆದ 11-4-1966 ರಂದು ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಖಾಯಂ ಆಗಿ ಕೆಲಸದಲ್ಲಿ ಇಟ್ಟುಕೊಳ್ಳುತ್ತೇವೆ, ಅವರನ್ನು ಕೆಲಸದಿಂದ ತೆಗೆದುಹಾಕುವುದಿಲ್ಲ ಎಂಬ ಮಾತನ್ನೂ ಕೂಡ ತಿಳಿಸಿದ್ದಾರೆ. 11-4-1966 ರವರೆಗೂ ಕೆಲಸ ಮಾಡುತ್ತಾ ಇದ್ದಂಥ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಖಾಯಂ ಮಾಡುತ್ತೇವೆ ಅಂತ ಮೇಲ್ಮನೆಯಲ್ಲಿ ಹೇಳಿದಂತಹ ಶ್ರೀಮಾನ್ ನಿಜಲಿಂಗಪ್ಪನವರ ಮಾತನ್ನು ರಾಜ್ಯ ಸರ್ಕಾರದವರು ಉಳಿಸಬೇಕೆಂಬ ವಿಷಯ ಮತ್ತು ಆ ನೌಕರರನ್ನು ಕೆಲಸದಿಂದ ಏನಾದರೂ ತೆಗೆದು ಹಾಕಿದರೆ ಅನೇಕ ನೌಕರರ ಸಂಸಾರಗಳಿಗೆ ತೊಂದರೆಯಾಗುತ್ತದೆ, ಮತ್ತು ಅವರನ್ನು ಮಧ್ಯ ನೀರಿನಲ್ಲಿ ಕೈ ಬಿಟ್ಟಹಾಗಾಗುತ್ತದೆ ಎಂಬ ವಿಷಯ ಏನಿದೆ ಇದು ಅತಿ ಜರೂರಾದುದು ಮತ್ತು ಸಾರ್ವಜನಿಕ ವಿಷಯವೂ ಕೂಡ ಆಗಿದೆ, ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕಾದ ಸಂದರ್ಭ ಬಂದಿದೆ. ಅವರನ್ನು ಕೆಲಸದಿಂದ ತೆಗೆದು ಹಾಕಿದರೆ ಅವರ ಸಂಸಾರಗಳವರು ನಿರ್ಗತಿಕರಾಗುತ್ತಾರೆ, ಅವರು ಬೀದಿಯಪಾಲಾಗತಕ್ಕ ಸಂದರ್ಭ ಇರುವುದರಿಂದ ಅಧ್ಯಕ್ಷರು ಈ ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ನ್ಯಾಯವಿ, ಈಗ ಶ್ರೀಮಾನ್ ಬಂಗಾರಪ್ಪನವರು ಏನು ಒಂದು ನಿಲುವಳಿ ಸೂಚನೆಗೆ ಅನುಮತಿಯನ್ನು ಕೇಳಿದ್ದಾರೆ ಅದು ಬಹಳ ತುರ್ತು ಪರಿಸ್ಥಿತಿಯೂ ಹೌದು ಮತ್ತು ಅದು 6—7 ಸಾವಿರ ಜನ ಸ್ಥಳೀಯವಾಗಿ ನೇಮಕವಾಗಿರತಕ್ಕ

ನೌಕರರಿಗೆ ಸಂಬಂಧಪಟ್ಟ ವಿಷಯವೂ ಆಗಿದೆ. ಮೊನ್ನೆತಾನೆ ಅವರ ಒಂದು ದೊಡ್ಡ ಮೆರವಣಿಗೆ ಕೂಡ ಇಲ್ಲೇ ಹಾದು ಹೋಯಿತು. ಅದನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನೋಡಿದರೋ ಇಲ್ಲವೋ ಗೊತ್ತಾಗಲಿಲ್ಲ. ಆದರೆ ಇದು ಆ ನೌಕರರ ತಪ್ಪಲ್ಲ. ಈಗಾಗಲೇ ಅವರಲ್ಲಿ ಅನೇಕರಿಗೆ ಮದುವೆ ಮುಂಜಿಗಳಾಗಿ ಮಕ್ಕಳಾಗಿವೆ. ಇಂಥ ಪರಿಸ್ಥಿತಿಯಲ್ಲಿ ಅವರನ್ನು ಮನೆಗೆ ಕಳುಹಿಸುವು ದೆಂದರೇನು? ಆದರೆ ಅಂಥಾ ಒಂದು ಪರಿಸ್ಥಿತಿ ಉದ್ಭವವಾಗಿದೆ. ಅಧ್ಯಕ್ಷರು ಈ ವಿಷಯವನ್ನು ಇಲ್ಲಿ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದೆಂದು ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಶ್ರೀ ಬಂಗಾರಪ್ಪನವರು ತಂದಿರುವ ವಿಚಾರ ಅತ್ಯಂತ ಜರೂರಾದದ್ದೂ ಮತ್ತು ಸಾರ್ವಜನಿಕ ಪ್ರಾಮುಖ್ಯತೆಯುಳ್ಳದ್ದೂ ಆಗಿದೆ. ಇವರನ್ನು ಈ ದಿವಸ ತೆಗೆಯಲೇ ಬೇಕು ಎಂಬ ಒಂದು ತೀರ್ಮಾನಕ್ಕೆ ಸರ್ಕಾರ ಅವರ ಒಂದು ಪಕ್ಷದ ಒತ್ತಡ ಕ್ಕಾಗಿ ಈ ಒಂದು ತೀರ್ಮಾನ ತೆಗೆದುಕೊಂಡಿದೆ ಎಂಬುದಾಗಿ ನವ ಗೆ ತಿಳಿದುಬಂದಿದೆ. ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಎಂಬ ಧೋರಣೆಯಿಂದ ಇವರನ್ನು ಬೀದಿಗೆ ತಳ್ಳುವುದಕ್ಕೆ ಪ್ರಯತ್ನ ಮಾಡಿ ದ್ದಾರೆ. ಇಷ್ಟು ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿದರೆ ಮುಂದೆ ಪರಿಣಾಮ ಬಹಳ ಭೀಕರ ವಾಗುತ್ತದೆ. ಇವರಲ್ಲಿ ಅನೇಕರು 5-6 ವರ್ಷಗಳ ಮೇಲ್ಪಟ್ಟು ಕೆಲಸ ಮಾಡಿದ್ದಾರೆ. ಇನ್ನು ಕೆಲವರು ಒಂದೆರೆಡು ವರ್ಷಗಳವರೂ ಇರಬಹುದು.

ಶ್ರೀ ಕೆ. ಎಸ್. ವೀರಪ್ಪಗೌಡ (ಶೃಂಗೇರಿ).—ಇಲ್ಲಿ ಈಗ ನಡೆಯುತ್ತಿರುವ ಚರ್ಚೆ ಅಜೆಂಡಾ ದಲ್ಲೇ ಇಲ್ಲವಲ್ಲ?

ಅಧ್ಯಕ್ಷರು.—ಅಡ್ಜೆರ್ನ್‌ಮೆಂಟ್ ಮೋಷನ್ ನಭೆಯಮುಂದೆ ಮಂಡಿಸುವುದಕ್ಕೆ ಅವಕಾಶ ಕೊಡಿ ಅಂತ ಬೇಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಅವರನ್ನೆಲ್ಲಾ ಕೆಲಸದಲ್ಲೇ ಇಟ್ಟುಕೊಳ್ಳುವುದಾಗಿ ಹಿಂದೆ ಇದ್ದ ಮುಖ್ಯ ಮಂತ್ರಿಗಳು ಭರವಸೆಯನ್ನು ಸಹ ಕೊಟ್ಟಿದ್ದರು. ಈಗ ಆ ಭರವಸೆಯನ್ನು ತಳ್ಳಿಹಾಕಿದ್ದಾರೆ. ಮೇಲಾಗಿ ಇದೊಂದು ಅತಿ ಜರೂರಾದ ಪ್ರಶ್ನೆ. ಇವರನ್ನು ಸಾಧ್ಯವಾದಷ್ಟೂ ಸರ್ವೀಸಿನಲ್ಲೇ ಉಳಿಸಿಕೊಳ್ಳುವುದಕ್ಕೆ ಇರತಕ್ಕ ಸಾಧ್ಯತೆಗಳನ್ನು ಚರ್ಚಿಸಲು ತಾವು ಅವಕಾಶ ಮಾಡಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಾನು ಇದೇ ವಿಚಾರದಲ್ಲಿ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೆನು. ಇದರ ಬಗ್ಗೆ ಅನೇಕರು ಕಪ್ಪುಬಾವುಟ ಪ್ರದರ್ಶನ ಕೂಡ ಮಾಡಿದ್ದಾರೆ. ಹಣಕಾಸಿನ ಹಾಗೂ ಮುಖ್ಯ ಮಂತ್ರಿಗಳಲ್ಲಿ ಅವರು ನಿಯೋಗ ಕೂಡ ಬಂದಿದ್ದಾರೆ. ಚರ್ಚೆಗೆ ಅವಕಾಶ ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಹೊಸ ವಿಷಯವನ್ನು ಹೇಳುತ್ತೇನೆ. ಸ್ಥಳೀಯ ವಾಗಿ ನೇಮಕವಾಗಿರತಕ್ಕ ಅಭ್ಯರ್ಥಿಗಳ ವಿಷಯವಾಗಿ ಹಿಂದೆ ನಾನು ಪ್ರಶ್ನೆ ಕಳುಹಿಸಿದ್ದೆ. ಆ ವಿಷಯದಲ್ಲಿ ಮಾನ್ಯ ಶ್ರೀ ಬಂಗಾರಪ್ಪನವರು ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅದು ಬಹಳ ಪ್ರಾಮುಖ್ಯವಾದಂಥ ವಿಷಯ. ಇದು ಬಹಳ ಜರೂರು ವಿಷಯ. ಯಾರೋ ಅವರ ಪಕ್ಷದ ಒತ್ತಾಯಕ್ಕೆ ಮಣಿದು ಇವರನ್ನು ತೆಗೆದುಹಾಕಬೇಕೆಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡಿರುವುದರಿಂದ ಸ್ಥಳೀಯ ಅಭ್ಯರ್ಥಿಗಳಾಗಿ ನಿಮ್ಮ ಸರ್ಕಾರದಲ್ಲಿ 4-5 ವರ್ಷಗಳ ಸೇವೆ ಮಾಡಿದಂಥ ಜನರು ಕೊನೆಗೆ ಫಾಲಿಡಾಲ್ ಕುಡಿದು ಸಾಯುವ ಪ್ರಸಂಗ ಬರಬಹುದು. ಅದರ ಬಗ್ಗೆ ಚರ್ಚೆಗೆ ಅವಕಾಶಕೊಡಬೇಕು.

MR. SPEAKER.—I have heard the hon. members. This question of local candidates is a very old one. This subject had figured in this House at the time of questions and answers on several occasions. The reaction of the Government has also been stated on more than one occasion. A similar motion was given notice of by hon. Member Sri Vatal Nagaraj and for the same reasons I disallowed it on 23rd March 1969. Nothing new has happened. If any matter is to be raised under rule 50 it must be a matter of urgent public importance. There is neither importance nor any urgency involved in the matter now raised. It is a continuing affair and therefore, I very much regret, I cannot permit it. I refuse my consent.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಅವರಿಗೆ ಕೆಲಸ ಹೋಗಿರುವುದರಿಂದ ಅನೇಕ ಜನರು ವಿಷ ತೆಗೆದುಕೊಂಡು ಪ್ರಾಣ ಬಿಡುವ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಬಹಳ ತೊಂದರೆಪಡುತ್ತಿದ್ದಾರೆ. ಇವತ್ತೂ ಕರೆದುಕೊಂಡು ಬನ್ನಿ ಅಂದರೆ ಆ 6 ಸಾವಿರ ಜನರನ್ನೂ ಕೂಡ ನಾನು ಕರೆದುಕೊಂಡು ಬರುತ್ತೇನೆ.

Mr. SPEAKER.—I have refused my consent.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ನಿಮ್ಮ ರೂಲಿಂಗ್ ವಿಷಯ ನಾನು ಹೇಳುತ್ತಾ ಇಲ್ಲ ಕಾನೂನಿನಲ್ಲಿ ಏನಿದೆ ಅಂದರೆ ಲೋಕಲ್ ಕ್ಯಾಂಡಿಡೇಟ್ಸ್ 2 ವರ್ಷಗಳವರೆಗೆ ಕೆಲಸಮಾಡಿದ್ದರೆ ಅವರನ್ನು ರೆಗ್ಯುಲರೈಸ್ ಮಾಡಬೇಕಾಗಿದೆ. ಮೂರು ವರ್ಷಗಳವರೆಗೆ ಮಾಡಿದ್ದರೆ ಅವರನ್ನು ಕಡ್ಡಾಯ ಮಾಡಬೇಕೆಂದಿದೆ.

ಅಧ್ಯಕ್ಷರು.—ಆ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ತಾವು ಹೇಳಿದ ರೂಲಿಂಗನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ತಮ್ಮ ರೂಲಿಂಗ್ ರೀಕನ್ಸಿಡರ್ ಮಾಡಬೇಕು. ಇದು ಸ್ಥಳೀಯ ಅಭ್ಯರ್ಥಿಗಳ ವಿಷಯ. ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಬೆಂಗಳೂರು ಡೈರಿಯಲ್ಲಿ ಕೆಲಸ ಮಾಡತಕ್ಕ ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದಿದ್ದಾರೆಂಬ ವಿಚಾರದ ಮೇಲೂ ಕೊಟ್ಟಿದ್ದೇನೆ. ಅದನ್ನು ರೀ-ಕನ್‌ಸಿಡರ್ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

Mr. SPEAKER.—I have given my ruling. I am sorry, I cannot reconsider it. Next item, calling attention notice by hon. Member Sri M. Nagappa.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

Mr. SPEAKER.—The hon. Member can give a notice and I shall consider. I am not permitting him now. There is no scope for such things.

Sri M. S. KRISHNAN.—I would like you to let me know why the adjournment motion has not been allowed ?

Mr. SPEAKER.—I have already given the reasons. There should be some discipline. I am not allowing it. I now call upon hon. Member Sri M. Nagappa.

Calling Attention to a Matter of Urgent Public Importance *re* : Fire Accident in Raichur Town

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ರಾಯಚೂರು ನಗರದಲ್ಲಿ 1969 ನೇ ಇಸವಿ ಮಾರ್ಚ್ 14ನೇ ತಾರೀಖು ರಾತ್ರಿ ಕೋ-ಆಪರೇಟೀವ್ ಪ್ರಿಂಟಿಂಗ್ ಪ್ರೆಸ್ಸಿಗೆ ಬೆಂಕಿ ಬಿದ್ದು ಅನಾಹುತವಾಗಿದೆ ಅದರಿಂದ ಸಾಧಾರಣವಾಗಿ 70 ಸಾವಿರ ರೂಪಾಯಿಗಳ ನಷ್ಟ ಸಂಭವಿಸಿದೆ. ಆ ಸಂದರ್ಭದಲ್ಲಿ ಫೈರ್ ಬ್ರಿಗೇಡ್‌ನವರು ತಕ್ಷಣ ಆ ಸ್ಥಳಕ್ಕೆ ಬಂದು ಬೆಂಕಿ ಹತ್ತಿಕೊಂಡಿದ್ದನ್ನು ನಂದಿಸುವ ಕೆಲಸವನ್ನು ಕ್ರಮವಾಗಿ ಮಾಡಲಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

Sri MANIK RAO PATIL (Deputy Minister for Home).—Sir, it is reported that on the night of 14th March 1969 a fire broke out in the premises of the Raichur District Co-operative Printing Press. The fire call message was received at the Raichur Fire Station at 21·30 hrs. and

within a minute's time, the Fire Force personnel rushed to the spot with two fire units. By then, the fire had spread to the roof of the building and the paper bundles stocked inside had cought fire. The tanker unit which was pressed into service had to make three trips to the water source situated at a distance of two furlongs from the place of the fire accident. The burning paper bundles were pulled out in stages with utmost care and caution, and it took nearly two hours and forty three minutes for the Fire Force personnel to extinguish the fire completely. It is reported that about 5 to 6 bales of paper, 4 to 5 tables, 3 wooden benches, roofing of the building and one pigeon hole rack were damaged in the fire. The total loss is estimated to be less than Rs. 10,000.

Due to the prompt action taken, the Fire Force personnel were able to save all important records of the Press and also the machineries and prevent damage to the neighbouring thatched buildings and other properties.

ಶ್ರೀ ಎಂ. ನಾಗಪ್ಪ.—ಮಾನ್ಯ ಉಪಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ, "within a minute's time the fire force personnel rushed to the spot with two fire units" ಎಂದು ಹೇಳಿದ್ದಾರೆ. ಫೈರ್ ಸ್ಟೇಷನ್ನಿಗೂ ಮತ್ತು ಕೋ ಆಪರೇಟಿವ್ ಪ್ರಿಂಟಿಂಗ್ ಪ್ರೆಸ್ಸಿಗೂ ಒಂದು ಮೈಲಿ ದೂರ ಇದೆ. ಒಂದು ನಿಮಿಷದಲ್ಲಿ ಒಂದು ಮೈಲಿ ದೂರ ಹೇಗೆ ಫೈರ್ ಬ್ರಿಗೇಡ್‌ನವರು ಬಂದರು ?

Sri MANIK RAO PATIL.—I don't think there is any difficulty to reach the spot within a minute's time. As just now the hon. Member stated that the distance between the place at which accident took place and the fire station is only one mile. If the fire Force Unit proceed at the rate of 60 miles per hour, there is no difficulty for them to reach the spot within a minute's time.

Collection of Land Revenue in Some Taluks

2-30 P.M.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ನ್ಯಾಯಮಿ, ಒಂದು ಪ್ರಾಮುಖ್ಯವಾದ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಭೂಕಂದಾಯದ ವಿಚಾರದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವ ಕಾಲದಲ್ಲಿ ಸರ್ಕಾರದವರು ಒಂದು ಆಶ್ವಾಸನೆಯನ್ನು ಕೊಟ್ಟರು. ಇದಕ್ಕೆ ಸಂಬಂಧ ಪಟ್ಟಹಾಗೆ ಒಂದು ತಿದ್ದುಪಡಿಯ ಮಸೂದೆಯನ್ನು ತರುವವರೆಗೆ ದೇಶದ ಎರ್ನಾ ಕಡೆಗಳಲ್ಲಿಯೂ ಕೂಡ ಬಲಾತ್ಕಾರವಾಗಿ ಮತ್ತು ಕಡ್ಡಾಯವಾಗಿ ಕಂದಾಯ ವಸೂಲು ಮಾಡಬಾರದು ಎಂದು ಸಂಬಂಧಪಟ್ಟ ಅಧಿಕಾರಿಗಳು ಎಲ್ಲರಿಗೂ ಆಜ್ಞೆಯನ್ನು ಮಾಡುತ್ತೇವೆಂದು ಈ ಸಭೆಗೆ ಭರವಸೆಯನ್ನು ಸರ್ಕಾರದವರು ಕೊಟ್ಟರು. ಇತ್ತೀಚೆಗೆ ಅನೇಕ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ಬಂದಿದ್ದಾರೆ. ಅಲ್ಲಿ ಸ್ಥಳೀಯ ಅಧಿಕಾರಿಗಳು ಈ ಬಗ್ಗೆ ಸರ್ಕಾರದವರು ಲಿಖಿತ ಮೂಲಕ ಆಜ್ಞೆಯನ್ನು ಕಳುಹಿಸಿಲ್ಲವೆಂದು ಹೇಳಿದರು. ಆ ಕಾರಣದಿಂದ ಬಲಾತ್ಕಾರವಾಗಿ ರೈತರಿಗೆ ಕೊಂದರೆ ಕೊಟ್ಟು ಕಂದಾಯ ವಸೂಲು ಮಾಡಿದ ಅನೇಕ ವರದಿಗಳು ಬಂದಿವೆ. ಸರ್ಕಾರ ಈ ರೀತಿ ಮಾಡಿದರೆ, ಶಾಸನಸಭೆಗೆ ಕೊಟ್ಟಂತಹ ಭರವಸೆಗೆ ಮರ್ಯಾದೆ ಏನು ಬಂತು ? ಸರ್ಕಾರ ತನ್ನ ಭರವಸೆಯನ್ನು ಈಡೇರಿಸುವ ಕಾಲದಲ್ಲಿ ವಿಳಂಬವಾಗಿ ವರ್ತಿಸಿದ್ದರಿಂದ ಸ್ಥಳೀಯ ಅಧಿಕಾರಿಗಳು ಕಂದಾಯ ವಸೂಲು ಮಾಡುವ ಆಜ್ಞೆಯನ್ನು ಜಾರಿಗೆ ತಂದಿದ್ದಾರೆ. ಸರ್ಕಾರದ ಕಾರ್ಯಕ್ರಮ ಚರ್ಚೆ ಇಲ್ಲ. ಇದಕ್ಕೆ ಕಾರಣ ಏನು ಎಂದು ತಿಳಿಯಬಯಸುತ್ತೇನೆ.